ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ (ಅ) ಪ್ರಶ್ನೆಗೆ "ಇಲ್ಲ" ಎಂದು ಉತ್ತರ ಕೊಟ್ಟಿದ್ದೇನೆ. (ಅ) ಪ್ರಶ್ನೆಗೆ "ಬಂದಿಲ್ಲ" ವೆಂದು ಉತ್ತರವನ್ನು ಕೊಟ್ಟು, ಅದರಲ್ಲೇ "ಈ ಹಾಗಿದ್ದಲ್ಲಿ" ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು" ಎಂದು ಕೇಳಿರುವುದಕ್ಕೆ "ಅರಸೀಕೆರೆ ಪಟ್ಟಣದ ಸಮಗ್ರ ನೀರು ಸರಬರಾಜು ಯೋಜನೆ ರೂ. 43.10 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಮಂಜೂರು ಆಗಿದ್ದು ಯೋಜನೆಯ ಎಲ್ಲಾ ಕೆಲಸಗಳೂ (ಎರಡು ಮೇಲ್ಮಟ್ಟದ ಜಲಾಶಯಗಳ ಹೊರತು) ಈಗಾಗಲೇ ಮುಗಿದಿದ್ದು ಕೊಳವೆ ಬಾವಿಗಳ ನೀರನ್ನು ಜನವರಿ 83ರಲ್ಲಿ ಪೈಪರಣಾ ವ್ಯವಸ್ಥೆಗೆ ನೀರಾಗಿ ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದೇನೆ;

ಶ್ರೀ ಜಿ. ಎಸ್. ಬಸವರಾಜ್ —ಸ್ವಾಮಿ, ಕುಡಿಯುವ ನೀರಿಗೆ ಕೊಂದರೆಯಾಗಿ ಜನರು ಚರಂಡಿಯಲ್ಲಿ ಹರಿಯುವ ಈ ಕಲುಷಿತ ನೀರನ್ನು ಕುಡಿಯುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಕೊಳವೆ ಬಾವಿಗಳ ಮುಖಾಂತರ ನೀರಿನ ಸರಬರಾಜು ಬಗ್ಗೆ 43.1 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕೆಲಸಕಾರ್ಯಗಳನ್ನು ತೆಗೆದುಕೊಂಡು ಅದು ಪೂರ್ಣವಾಗಿದೆ. ಆಮೇಲೂ ಕೂಡ ಹೆಚ್ಚಿನ ನೀರಿನ ಸರಬರಾಜು ಬಗ್ಗೆ ಕೆಲಸಕಾರ್ಯಗಳು ಮುಗಿದಿದ್ದು ಉದ್ದಾಟನಾ ಸಮಾರಂಭಕ್ಕೆ ಅಮಂತ್ರಣ ಪತ್ರವನ್ನೂ ಕೂಡ ಕಳುಹಿಸಿ ಕೊಟ್ಟಿರುತ್ತೀರಿ. 43 ಲಕ್ಷ ರೂಪಾಯಿಗಳಲ್ಲಿ 28 ಕೊಳವೆ ಬಾವಿಗಳನ್ನು ತೆಗೆದು ನೀರಿನ ವಿತರಣೆಯ ವ್ಯವಸ್ಥೆಯು ಕೂಡ ಆಗಿರುತ್ತದೆ. ಕೊಪ್ಪಳದಲ್ಲಿ ಇರುವಂಥ ಆರುಸಾವಿರ ಗ್ಯಾಲನ್ ರಿಸರ್ವಾಯರ್ ಮಾಡಿಕೊಂಡು ನೀರನ್ನು ಮತ್ತೆ ಅದನ್ನೇ ನಾಗತಿ ಹಳ್ಳಿಯಲ್ಲಿರತಕ್ಕಂಥ 30 ಸಾವಿರ ಗ್ಯಾಲನ್ ರಿಸರ್ವಾಯರ್ ಪಂಪ್‌ಮಾಡಿಕೊಂಡು ಡಿಸ್ಟ್ರಿಬ್ಯೂಷನ್ ಲೈನ್‌ಗಳನ್ನು ಅಳವಡಿಸಿ ನೀರನ್ನು ವಿತರಣೆ ಮಾಡಲಾಗುತ್ತಿದೆ. ಅರಸೀಕೆರೆಗೆ ಇಷ್ಟೊಂದು ನೀರಿನ ಸರಬರಾಜಿನ ವ್ಯವಸ್ಥೆ ಆಗಿದೆ.

ಶ್ರೀ ಜಿ. ಎಸ್. ಬಸವರಾಜ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಊರಿನಿಂದ ಈಗತಾನೇ ಬರುತ್ತಿದ್ದೇನೆ. ಅಲ್ಲಿರತಕ್ಕಂಥ ಬೋರ್‌ವೆಲ್ಸ್‌ಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಬೋರ್‌ವೆಲ್‌ಗಳ ಜೊತೆಗೆ ಅಲ್ಲಿರತಕ್ಕಂಥ ಸಬ್‌ಸ್ಟಾಂಡರ್ಡ್ ಪೈಪ್‌ಗಳು ಒಡೆದುಹೋಗಿ ಅರಸೀಕೆರೆಗೆ ನೀರಿನ ಅಭಾವ ಉಂಟಾಗಿದೆ. ಆದ್ದರಿಂದ ಸರ್ಕಾರದವರು ನೀರಿನ ಅಭಾವನ್ನು ನೀಗಲು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ಈಗ ಏನು ಮಾಹಿತಿಯನ್ನು ಕೊಟ್ಟಿರುತ್ತೀರಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇಲ್ಲಗೆ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸಲ್ಪಡುವ ಪ್ರಶ್ನೆಗಳ 9ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು ಮತ್ತು ಇನ್ನಿತರ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ 9ನೇ ಪಟ್ಟಿಯನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದಿಡುತ್ತೇನೆ.

ಕೇರಳ ರಾಜ್ಯದಿಂದ ವಿದ್ಯುಚ್ಛಕ್ತಿಯನ್ನು ಪಡೆಯಲು ರಾಜ್ಯ ಸರ್ಕಾರದವರು ಮಾಡಿದ ಒಪ್ಪಂದ

29 (38) ಶ್ರೀ ಪಿ. ರಾಮಚಂದ್ರ (ಮುಲ್ಲೆಶ್ವರಂ).—ಮಾನ್ಯ ಆಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ತಲೆದೋರಿರುವ ವಿದ್ಯುಚ್ಛಕ್ತಿ ಕ್ಷಾಮವನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಆ) ತಾತ್ಕಾಲಿಕ ಕ್ರಮಗಳು ಅಲ್ಲದೆ, ಶಾಶ್ವತ ಕ್ರಮಗಳ ಬಗ್ಗೆ ಸರ್ಕಾರ ಸಿದ್ಧತೆ ಮಾಡಿದೆಯೇ ?

ಇ) ಆಂಧ್ರದಿಂದ ಪಡೆಯುತ್ತಿರುವ ವಿದ್ಯುಚ್ಛಕ್ತಿ ಬಗ್ಗೆ ರಾಜ್ಯ ಸರ್ಕಾರ ಮಾಡಿಕೊಂಡ ಒಪ್ಪಂದದ ಷರತ್ತುಗಳೇನು ?

ಶ್ರಿ ಜೆ. ಹೆಚ್. ಪಟೇಲ್.—ವಿದ್ಯುಚ್ಛಕ್ತಿ ಸಚಿವರು ಮತ್ತು ಅಬಕಾರಿ ಮಂತ್ರಿಗಳು

ಅ) ನೆರೆ ರಾಜ್ಯಗಳಿಂದ ವಿದ್ಯುತ್ ಆಮದಿಗೆ ರಾಜ್ಯ ಸರ್ಕಾರ ಪ್ರಯತ್ನಿಸಿತು ಹಾಗೂ ಸಾಧ್ಯವಿದ್ದಷ್ಟನ್ನು ಪಡೆದುಕೊಂಡಿತು ರಾಜ್ಯದೊಳಗಿನ ಹೆಚ್. ಟಿ ಗಾ ಹಕರ ಮೇಲೆ ಹಂತ ಹಂತವಾಗಿ ವಿದ್ಯುತ್ ಕಡಿತವನ್ನು ವಿಧಿಸಲಾಯಿತು. ಹಗಲಿನಲ್ಲಿ ಪಟ್ಟಣಗಳಲ್ಲಿ 3 ಗಂಟೆಗಳ ಕಾಲ ಹಳ್ಳಿಗಳಲ್ಲಿ 6 ಗಂಟೆಗಳಕಾಲ ಕ್ರಮವ್ಯಾಪ್ತಿ ಮತ್ತು ಮುನ್ಸೂಚನೆ ಸಹಿತವಾಗಿ (ಲೋಡ್‌ಷೆಡ್ಡಿಂಗ್) ಸಿರ್ ವಿದ್ಯುದ್ವೀಕರಣ ಮಾಡಲಾಯ್ತು. ಅಷ್ಟಾದರೂ ಬೇರೆ ಉಪಾಯ ಇಲ್ಲದಾಗ ಇಡೀ ಲೈನ್‌ಗಳನ್ನೇ ಸಿರ್ ವಿದ್ಯುದ್ವೀಕರಣ (De-energised) ಮಾಡಬೇಕಾಯಿತು.

(ಆ) ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸೂಪಾಡ್ಯಾಂ ಅನ್ನು 1985 ರಲ್ಲಿ ಪೂರ್ಣಗೊಳಿಸಲಾಗುವುದು. ಕಾಳಿಯ 5 ಮತ್ತು 6 ನೇ ಯೂನಿಟ್‌ಗಳು ಡಿಸೆಂಬರ್ 83 ರಲ್ಲಿ ಕಾರ್ಯಾರಂಭವಾಗುವುವು ರಾಯಚೂರು ಥರ್ಮಲ್‌ಸ್ಟೇಷನ್‌ನ ಒಂದನೇ ಹಂತ ಆಗಸ್ಟ್ 84 ರಲ್ಲಿ ಪೂರ್ಣಗೊಳ್ಳುವುದು. ಇದರ ಎರಡನೇ ಹಂತಕ್ಕೆ ಬೇಕಾಗಿರುವ ಕಲ್ಲಿದ್ದಲಿನ ಪೂರೈಕೆಗಾಗಿ ಭಾರತ ಸರ್ಕಾರದ ಒಪ್ಪಿಗೆ ಕೇಳಲಾಗಿದೆ. ವಾರಾಹಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ನುಂಡಿನ ಯೋಜನೆ ಅವಧಿಯಲ್ಲಿ ಅಂದರೆ 86 ರ ಜೂನ್ ನಲ್ಲಿ ಪೂರ್ಣಗೊಳ್ಳುವುದು. ಇದಲ್ಲದೆ ಕಾಳಿನದಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ಎರಡನೇ ಹಂತವನ್ನು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗಿದೆ ಕರ್ನಾಟಕ ವಿದ್ಯುತ್ ನಿಗಮವು ಮಿನಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳಾದ ಘಟಪ್ರಭಾ, ಶಿವಪುರ ಕೆನಾಲ್ ಡ್ರಾಪ್ ಮತ್ತು ಪಿಶ್ವೇಶ್ವರಯ್ಯ ಕಾಲುವೆಯ ಮದ್ದೂರು ಶಾಖೆಯಲ್ಲಿ ಸ್ಥಾಪಿಸಲು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಇದಲ್ಲದೆ ಕರ್ನಾಟಕ ವಿದ್ಯುತ್ ನಿಗಮವು ಬೇರೆ 25 ಪ್ರಾಜೆಕ್ಟ್ ಸ್ವರೂಪವನ್ನು ತಯಾರಿಸಿದೆ. ಈ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಿದ್ದೇ ಆದರೆ ವಿದ್ಯುತ್ ಕೊರತೆಯನ್ನು ಶಾಶ್ವತವಾಗಿ ತಪ್ಪಿಸಬಹುದು

(ಇ) ಆಂಧ್ರಪ್ರದೇಶದಲ್ಲಿ ವಿದ್ಯುತ್ ದೊರಕುವ ಸ್ಥಿತಿಯು ಉತ್ತಮಗೊಂಡರೆ ಮಾತ್ರ ಆ ರಾಜ್ಯದಿಂದ ವಿದ್ಯುತ್ ಆಮದಿಗೆ ಕರ್ನಾಟಕ ಸರ್ಕಾರಕ್ಕೆ ಆಶ್ವಾಸನೆ ದೊರೆತಿದೆ ಒಪ್ಪಂದವೇನೂ ಆಗಿಲ್ಲ.

ಕೇರಳ ರಾಜ್ಯದಿಂದ ವಿದ್ಯುತ್‌ಚ್ಛಕ್ತಿ ಪಡೆಯುವ ಬಗ್ಗೆ

29 ಶ್ರೀ ಪಿ. ರಾಮುದೇವ್ (ಮುಲ್ಕೀಶ್ವರ) ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೇರಳ ರಾಜ್ಯದಿಂದ ವಿದ್ಯುಚ್ಛಕ್ತಿ ಪಡೆಯಲು ರಾಜ್ಯ ಸರ್ಕಾರದವರು ಮಾಡಿಕೊಂಡು ಒಪ್ಪಂದದ ವಿವರಗಳೇನು ?

ಆ) ಈ ಒಪ್ಪಂದದಂತೆ ರಾಜ್ಯಕ್ಕೆ ಕೇರಳ ಸರ್ಕಾರದ ವಿದ್ಯುಚ್ಛಕ್ತಿ ಸರಬರಾಜು ಮಾಡದಿರುವುದರಿಂದ ರಾಜ್ಯಕ್ಕೆ ಉಂಟಾದ ತೊಂದರೆಗಳೇನು ?

ಇ) ಒಪ್ಪಂದ ಉಲ್ಲಂಘನೆಯ ಬಗ್ಗೆ ರಾಜ್ಯ ಸರ್ಕಾರ ಯಾವುದಾದರೂ ಕ್ರಮ ಕೈಗೊಳ್ಳುತ್ತಿದೆಯೇ ?

ಶ್ರೀ ಜಿ. ಹೆಚ್. ಪಟೇಲ್ ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು. —

ಅ) 1982-83ರಲ್ಲಿ ಯಾವ ಒಪ್ಪಂದವನ್ನು ಕೇರಳ ಸರ್ಕಾರದೊಂದಿಗೆ ವಿದ್ಯುಚ್ಛಕ್ತಿ ಆಮದಿಗೆ ರಾಜ್ಯ ಸರ್ಕಾರ ಮಾಡಿಕೊಂಡಿಲ್ಲ.

ಆ) ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದ ದೃಷ್ಟಿಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದ ದೃಷ್ಟಿಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಟಿ. ನರಸೀಪುರ ಇದರ ಬಗ್ಗೆ

30 ಶ್ರೀ. ಟಿ. ಬೊರಯ್ಯ (ಬನ್ನೂರು).—ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಟಿ. ನರಸೀಪುರ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಟಿ. ನರಸೀಪುರ ಇದರಲ್ಲಿ 'ಎ' ವ್ಯವಸಾಯಗಾರರ ಸಂಘಗಳ ಸದಸ್ಯರ ಸಂಖ್ಯೆಗಳನ್ನು ತಿಳಿಸುವುದು.

ಆ) ವ್ಯವಸಾಯಗಾರರಲ್ಲದ ಸಂಘಗಳ ಸದಸ್ಯರ ಸಂಖ್ಯೆ ಎಷ್ಟು, ವಿವರ ತಿಳಿಸುವುದು.